‘ನಾನು ಎದ್ದು ಮಂಟಪದ ಕಂಬದ ಮರೆಗೆ ನಿಂತು ಅಪ್ಪನತ್ತ ಹೋಮ ಕ್ರಿಯೆ ನಡೆಸು, ಜನ ಸೇರಿರುವ ಕಡೆ ಅಮ್ಮನ ಮೇಲೆ ಏನು ನಿನ್ನ ವರಾತ ಅನ್ನುವಂತೆ ಕೈಯ್ಯಾಡಿಸಿದೆ. ಶೀನಿ, ನನ್ನ ಕಡೆಗೂ ಅಪ್ಪ ಎಂಥಾ ಜಾಣವರಸೆ ಮಾತು ತೆಗೆದ ಗೊತ್ತಾ, “ಲೇ ಗೋವಿಂದಾ ಅಲ್ಲಿ ಯಾಕೆ ಹೋಗಿ ನಿಂತೆಯೋ, ಇಲ್ಲಿ ದೋಷ ಪರಿಹಾರ ಕಾರ್ಯ ನಡೆಯುತ್ತಿರುವುದು ಕಾಣಿಸುವುದಿಲ್ಲವಾ? ಎಲೆ, ಅಡಿಕೆ, ಹಣ್ಣು, ಕಾಯಿ ದರ್ಭೆ ಎತ್ತಿ ಕೊಡು ಬಾ” ಎಂದು ನನಗೂ ಜಾಡಿಸಿದ.

‘ಅಮ್ಮ ಬೆಳಗ್ಗೆಯೇ ಸ್ನಾನ ಮಾಡಿದ್ದಳಲ್ಲ, ಆಶ್ಚರ್ಯವೆಂದರೆ ಉಟ್ಟಿದ್ದ ಹಸಿರು ಸೀರೆ ಬದಲಾಯಿಸಿದಳು. ಮಡಿ ಉಟ್ಟಳು. ತಾಮ್ರದ ಸಣ್ಣ ಚರಿಗೆಯನ್ನು ಹುಣಸೆ ಹುಳಿಯಿಂದ ಬೆಳಗಿದಳು. ಅಪ್ಪನಿಗೆ ಬೆಳಗಿನಿಂದ ಬೇಕಾದ ಸಾಮಾನು ಸರಂಜಾಮು ಒದಗಿಸಲು, ಹೊಗೆ ಹಾಕಿದ್ದ ಹೋಮ ಕುಂಡದ ಬೆಂಕಿ ತಾಗಿ, ಬೆವರು ಸುರಿದಿದ್ದ ಹಣೆಯಲ್ಲಿ ಅವಳ ಕುಂಕುಮ ಅಳಿಸಿ ಹೋಗಿತ್ತು. ಮಡಿ ಉಟ್ಟವಳು ತಿರುಗಿ ಮುಖ ತೊಳೆದಳು, ಹಣೆಗೆ ಕುಂಕುಮ ಇಡಲಿಲ್ಲ. ಹೊಳೆಯ ಕಡೆಗೆ ನಡೆದಳು.’

‘ಕಂಬದ ಮರೆಗೆ ನಿಂತ ನನ್ನನ್ನು ಅಪ್ಪ ಗದರಿಸಿ ಕರೆಯದೇ ಹೋಗದಿದ್ದರೆ ನಾನು ಅಮ್ಮನೊಡನೆ ನದೀ ತೀರಕ್ಕೆ ಹೋಗಿಬಿಡುತ್ತಿದ್ದೆ. ಇನ್ನು ಗೊತ್ತಿದ್ದೂ ಅಮ್ಮನೊಡನೆ ಆಚೆ ತಲೆ ಹಾಕಿದರೆ ಕಷ್ಟ ಅಂದುಕೊಂಡು ಅಪ್ಪನ ಸಮ್ಮುಖದಲ್ಲೇ ಉಳಿದೆ. ನಾನು ಒಂದು ವೇಳೆ ಅವಳ ಜೊತೆ ಹೋಗಿದ್ದರೆ, ನೀರು ತುಂಬಿಕೊಂಡವಳು ದಡದಲ್ಲಿ ನಿಂತ ನನ್ನ ಮುಖ ನೋಡಿಯಾದರೂ ವಾಪಸು ಬಂದುಬಿಡುತ್ತಿದ್ದಳೋ ಏನೋ? ಅಪ್ಪನ ಬಾಯಿ ಹಾಗಿರಲಿ, ಅಮ್ಮನೊಂದಿಗೆ ನೀರಿಗೆ ಹೋಗದ ನಾನೇ ಅವಳ ಸಾವಿನ ನಿರ್ಧಾರಕ್ಕೆ ಕಾರಣನಾದೆನೋ ಎಂಬ ಅಪರಾಧಿ ಭಾವವು ಕಾಡುತ್ತಿದೆ.’

‘ಅಮ್ಮ ಕುಜದೋಷ ಪರಿಹಾರ ಸಮಯದಲ್ಲಿ ಅಂದರೆ ಗುಳಿಕ ಕಾಲದಲ್ಲೇ ಸತ್ತದ್ದೇ, ಕಾವೇರಿ ಮಾತೆಯಲ್ಲಿ ಲೀನಗೊಂಡದ್ದೇ ದೈವಚಿತ್ತವಾಗಿ ಕಂಡುಬಿಟ್ಟಿತ್ತಲ್ಲಾ ಅಂತ ಎದೆಯೊಳಗೆ ಅವಳು ಸತ್ತದ್ದರ ಅನುಮಾನ ಸಂಗತಿ ನಿತ್ಯ ಉಣ್ಣುವ ಅನ್ನಕ್ಕೆ ಅಡ್ಡಲಾಗಿ ಕೂತುಬಿಟ್ಟಿದೆ, ಅದಕ್ಕೇ ನೋಡು, ನಾನು ಸಿಟಿಯಲ್ಲಿ ಸೆಟಲ್ ಆದ ನಂತರ ರಾಜಿಯನ್ನು ಕರೆದುಕೊಂಡು ಬಂದದ್ದು. ನಿನಗೆ ಅಮ್ಮ ಸತ್ತದ್ದು ಕಾಡುತ್ತಿದೆ ನಿಜ. ಯಾಕೆಂದರೆ ಅವಳ ಸಾವನ್ನು ಕಣ್ಣಾರೆ ಕಂಡದ್ದಕ್ಕೆ ಅನ್ನು. ಆದರೆ, ರಾಜಿ ನಿತ್ಯವೂ ಹೂ ಬತ್ತಿ ಹೊಸೆದು ಗತಿಗೆಟ್ಟು ಸಾಯುವುದು ಬೇಡ. ಅಡುಗೆ ಕೆಲಸಕ್ಕೆ ಅಂತ ಊರುಕೇರಿ ಪಾಲಾದ ಅವಳ ಗಂಡ ವಾಪಸು ಬರಲೇ ಇಲ್ಲವಲ್ಲ’ ಎಂದು ಹಿಂದಿನದನ್ನು ನೆನಪಿಸಿಕೊಂಡ ಶೀನಿ.

‘ಲೇ ಗೋವಿಂದ ನಿನಗೆ ಒಂದು ಗುಟ್ಟು ಹೇಳಬೇಕು ಕಣಯ್ಯ. ನೀನು, ಅಮ್ಮ ಸತ್ತದ್ದರ ನೆನಪು ಹೇಳಿದೆಯಲ್ಲ. ಇಲ್ಲಿ ಕೇಳು ನಾನು ದೇವಸ್ಥಾನದ ಹುಂಡಿ ಕದ್ದ ದಿನ ರಾಜಿ ನಾನು ಮಾಡಿದ ಆ ಘನ ಕಾರ್ಯವನ್ನು ನೊಡುತ್ತಾ ನಿಂತಿದ್ದಳಲ್ಲಯ್ಯ! ಹಾಗೆ ಆವತ್ತು ಅವಳು ನೋಡಿದ್ದರ ನೋಟ ಮನಸ್ಸಿನಲ್ಲಿ ಉಳಿದುಬಿಟ್ಟಿದೆ. ನಾನು ಮಾಡಿದ್ದು ಪಾಪ ಕಾರ್ಯವೋ ಇಲ್ಲ ನನ್ನ ಜೀವನದ ಇನ್ನೊಂದು ಮಾರ್ಗವನ್ನು ಹುಡುಕುವ ಹಟದ ಮೇಲೆ ಮಾಡಿದ್ದೋ ಹೇಗೆ ಹೇಳಲಿ? ಅಪ್ಪನ ಪ್ರಕಾರ ಅಮ್ಮ ನೀರು ಪಾಲಾದದ್ದೋ ಇಲ್ಲ ಮೊಸಳೆಯ ಪಾಲಾದದ್ದೋ ದೈವಚಿತ್ತವಾದರೆ ನಾನು ಗರ್ಭಾಂಕಣಕ್ಕೆ ನುಗ್ಗಿದ ಸಾಹಸವೂ ದೈವಚಿತ್ತವೇ ಅಂದುಕೋ. ಅವಘಡಗಳಿಗೆಲ್ಲ ಅಪ್ಪನ ಪಂಚಾಂಗದಲ್ಲಿ ಪರಿಹಾರವಿರುತ್ತಿತ್ತಲ್ಲ ಹಾಗೆ!’ ಎಂದ ಶೀನಿ.

ಗೋವಿಂದನಿದ್ದು ಬಲವಾಗಿ ನಗುತ್ತ ‘ಅಲ್ಲಯ್ಯಾ ಶೀನಿ ಊರ ಪಂಚಾಂಗ ಅಪ್ಪನ ಕೈಯಲ್ಲಿದ್ದಂತೆ, ಅಪ್ಪನ ಜಾತಕ ನಿನ್ನ ಕೈಯಲ್ಲಿ ಇತ್ತಲ್ಲಯ್ಯಾ. ನೀನು ಕಾಸು ಕದ್ದು ಹೋದೆಯಲ್ಲಾ, ಆಗ ಅಪ್ಪ ಅದನ್ನೂ ದೇವರ ತಲೆಯ ಮೇಲೆ ಹಾಕಿಬಿಟ್ಟ. “ಮನುಷ್ಯರ ಗ್ರಹಗತಿಯಂತೆ ಯಾವ್ಯಾವುದೋ